# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2213** |
| **ಸದಸ್ಯರ ಹೆಸರು** | : | **ಶ್ರೀ ಬಿ.ಕೆ. ಹರಿಪ್ರಸಾದ್**<br>**(ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **26-03-2026** |
| **ಉತ್ತರಿಸುವ ಸಚಿವರು** | : | **ಮಾನ್ಯ ಗೃಹ ಸಚಿವರು** |

| | | |
|---|---|---|
| (ಅ) | ರಾಜ್ಯ ಗೃಹರಕ್ಷಕ ದಳವು ಸ್ವಯಂಸೇವಕ ಪಡೆಯಾಗಿರುವುದರಿಂದ ಈಗಾಗಲೇ ಬೇರೆಡೆ ಉದ್ಯೋಗದಲ್ಲಿರುವವರು (ಸರ್ಕಾರಿ/ಖಾಸಗಿ) ಗೃಹರಕ್ಷಕರಾಗಿ ಸೇವೆ ಸಲ್ಲಿಸಲು ಇರುವ ಮಾನದಂಡಗಳೇನು: ಇಂತಹ ಉದ್ಯೋಗಿಗಳಿಗೆ ವಿಶೇಷ ರಜೆ ಅಥವಾ ಪ್ರೋತ್ಸಾಹಧನ ನೀಡುವ ಬಗ್ಗೆ ಸರ್ಕಾರ ನೀತಿ ರೂಪಿಸಿದೆಯೇ: | ಸರ್ಕಾರಿ/ಖಾಸಗಿ ಉದ್ಯೋಗದಲ್ಲಿರುವವರು ಸ್ವಯಂ ಸೇವಕ ಗೃಹರಕ್ಷಕ ಸದಸ್ಯತ್ವಕ್ಕೆ ನೋಂದಣಿ ಹೊಂದಲು **ಈ ಕೆಳಕಂಡ ಮಾನದಂಡಗಳು ಅನ್ವಯವಾಗುತ್ತವೆ**.<br>1. ಗೃಹರಕ್ಷಕ ಸದಸ್ಯರಾಗಿರುವ ಸರ್ಕಾರಿ/ಖಾಸಗಿ ಇಲಾಖೆ/ಸಂಸ್ಥೆಗಳಲ್ಲಿನ ನೌಕರರು ಗೃಹರಕ್ಷಕದಳದ ತರಬೇತಿ, ಕರ್ತವ್ಯಗಳಿಗೆ ಕಳುಹಿಸಲು ಆಕ್ಷೇಪಣೆ ಇರುವುದಿಲ್ಲ ಎಂಬುದಾಗಿ ಮಾತೃ ಇಲಾಖೆಯಿಂದ ಪ್ರಮಾಣಪತ್ರ ಸಲ್ಲಿಸಬೇಕು.<br>2. ಕನಿಷ್ಠ ವಯಸ್ಸು 19 ವರ್ಷ ಗರಿಷ್ಠ 50 ವರ್ಷ ವಯೋಮಿತಿ ಒಳಗಿರಬೇಕು.<br>3. ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು.<br>4. ದೈಹಿಕವಾಗಿ ಸದೃಢರಾಗಿರಬೇಕು.<br>5. ಸ್ಥಳೀಯ ಅಭ್ಯರ್ಥಿಗಳಾಗಿರಬೇಕು.<br>6. ಪೊಲೀಸ್ ಚಾರಿತ್ರ್ಯ ಪರಿಶೀಲನಾ ವರದಿಯಿಂದ ವಿನಾಯಿತಿ ಇರುತ್ತದೆ.<br><br>**<u>ಸೌಲಭ್ಯಗಳು:</u>**<br>ಉದ್ಯೋಗದಲ್ಲಿರುವ (ಸರ್ಕಾರಿ/ಖಾಸಗಿ) ಗೃಹರಕ್ಷಕ ಸದಸ್ಯರು ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ ಹೊಂದಿದ ಸಂದರ್ಭದಲ್ಲಿ ಪ್ರಸ್ತುತ ಜಿಲ್ಲೆಯಲ್ಲಿ ಹೊಂದಿದ್ದ ಶ್ರೇಣಿಯನ್ನು ವರ್ಗಾವಣೆ ಹೊಂದಿದ ಜಿಲ್ಲೆಯಲ್ಲಿ ಶ್ರೇಣಿ ಲಭ್ಯವಿದ್ದಲ್ಲಿ ಮುಂದುವರೆಸಬಹುದು. ಇಲ್ಲವಾದಲ್ಲಿ, ಕೇಂದ್ರ ಕಚೇರಿಗೆ ಪ್ರಸ್ತಾವನೆ ಸಲ್ಲಿಸಿ, ಅನುಮತಿ ಪಡೆದು ಶ್ರೇಣಿಯನ್ನು ಸೃಜಿಸಿ ಅವರನ್ನು ಸದಸ್ಯತ್ವದಲ್ಲಿ ಮುಂದುವರೆಸಲಾಗುವುದು.<br>ಸರ್ಕಾರಿ/ಖಾಸಗಿ ಉದ್ಯೋಗದಲ್ಲಿರುವವರು ಸ್ವಯಂ ಸೇವಕ ಗೃಹರಕ್ಷಕ ಸದಸ್ಯರಾಗಿ ನೋಂದಣಿಗೊಂಡು ಗೃಹರಕ್ಷಕರಾಗಿ ಸೇವೆ ಸಲ್ಲಿಸುತ್ತಿರುವಂತಹ ಸದಸ್ಯರಿಗೆ ಕರ್ನಾಟಕ ಗೃಹರಕ್ಷಕ ಕಾಯ್ದೆ, 1963 ರ ಕಲಂ 5ಎ(1) ರನ್ವಯ ವರ್ಷದಲ್ಲಿ ಗೃಹರಕ್ಷಕ ಕರ್ತವ್ಯಗಳನ್ನು ನಿರ್ವಹಿಸಲು 60 ದಿನಗಳ ಮಿತಿಗೊಳಪಟ್ಟು ವೇತನ ಸಹಿತ ಮತ್ತು ಇತರೆ ಭತ್ಯೆಯೊಂದಿಗೆ ಕರ್ತವ್ಯದ ಅವಧಿಯೆಂದು (ಮಾತೃ ಇಲಾಖೆ) ಪರಿಗಣಿಸಲು ಅವಕಾಶವಿರುತ್ತದೆ.<br><br>ಗೃಹರಕ್ಷಕರಾಗಿ ಸೇವೆ ಸಲ್ಲಿಸುವ ಸರ್ಕಾರಿ/ಖಾಸಗಿ ಉದ್ಯೋಗಿಗಳಿಗೆ ಕರ್ತವ್ಯ ನಿರ್ವಹಿಸಿದ/ವಾರದ ಕವಾಯತು/ತರಬೇತಿಗೆ ಹಾಜರಾದ ಅವಧಿಗೆ ಅನ್ವಯಿಸುವ ಕರ್ತವ್ಯ/ಪ್ರಯಾಣ/ಕವಾಯತು/ತರಬೇತಿ ಭತ್ಯೆ ಹೊರತುಪಡಿಸಿ, ಯಾವುದೇ ಪ್ರೋತ್ಸಾಹ ಧನ ಅಥವಾ ವಿಶೇಷ ರಜೆ ಸೌಲಭ್ಯವಿರುವುದಿಲ್ಲ. |

| | | |
|---|---|---|
| (ಆ) | ಸಂಚಾರ ನಿಯಂತ್ರಣ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಸಿಬ್ಬಂದಿಯಷ್ಟೇ ಶ್ರಮಿಸುತ್ತಿರುವ ಗೃಹರಕ್ಷಕರಿಗೆ ನೀಡಲಾಗುತ್ತಿರುವ ಪ್ರಸ್ತುತ ದಿನಭತ್ಯೆ (Honorarium) ಎಷ್ಟು; ಸುಪ್ರೀಂ ಕೋರ್ಟಿನ ನಿರ್ದೇಶನದಂತೆ (Grah rakshak vs State of NCR Delhi) ಪೊಲೀಸರ ಕನಿಷ್ಠ ವೇತನಕ್ಕೆ ಸಮನಾದ ಭತ್ಯೆಯನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ, ಈ ತಾರತಮ್ಯಕ್ಕೆ ಕಾರಣಗಳೇನು: | ಪೊಲೀಸ್ ಇಲಾಖೆಯಲ್ಲಿನ ಸಂಚಾರ ನಿಯಂತ್ರಣ & ಕಾನೂನು ಸುವ್ಯವಸ್ಥೆ ಕರ್ತವ್ಯಗಳಿಗೆ ನಿಯೋಜನೆಗೊಳ್ಳುವ ಗೃಹರಕ್ಷಕರಿಗೆ ಪ್ರಸ್ತುತ ದಿನ ಒಂದಕ್ಕೆ ರೂ. 800/- ರಂತೆ ಕರ್ತವ್ಯ ಭತ್ಯೆ ಪಾವತಿಸಲಾಗುತ್ತಿದೆ.<br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ: 11-03-2015 ಹಾಗೂ ಗೃಹ ಮಂತ್ರಾಲಯದ ಪತ್ರ ದಿನಾಂಕ: 04-06-2015 ರನ್ವಯ ಕರ್ನಾಟಕ ಸರ್ಕಾರದ ಆದೇಶ ದಿನಾಂಕ: 07-09-2019 ರಲ್ಲಿ ಗೃಹರಕ್ಷಕರ ಕರ್ತವ್ಯ ಭತ್ಯೆಯನ್ನು (ಪೊಲೀಸ್ ಪೇದೆಯ ವೇತನಕ್ಕೆ ಸಮನಾಗಿ) ದಿನಾಂಕ: 01-04-2020 ರಿಂದ ಜಾರಿಗೆ ಬರುವಂತೆ ರೂ. 380/- ರಿಂದ ರೂ. 750/-ಕ್ಕೆ ಹೆಚ್ಚಿಸಿ ನಿಗದಿ ಪಡಿಸಲಾಗಿರುತ್ತದೆ.<br>ಮುಂದುವರೆದು, ಸದರಿ ಕರ್ತವ್ಯ ಭತ್ಯೆಯನ್ನು ಸರ್ಕಾರದ ಆದೇಶ ದಿನಾಂಕ 29-02-2024ರಲ್ಲಿ, ರೂ. 750/- ರಿಂದ ರೂ. 800 ಗಳಿಗೆ ಹೆಚ್ಚಿಸಲಾಗಿದೆ. |
| (ಇ) | ಕರ್ತವ್ಯ ನಿರತ ಗೃಹರಕ್ಷಕರಿಗೆ ಪೊಲೀಸ್ ಆರೋಗ್ಯ ಭಾಗ್ಯದ ಮಾದರಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆಯೇ : ಕರ್ತವ್ಯದ ವೇಳೆ ಸಂಭವಿಸುವ ಅಪಘಾತ ಅಥವಾ ಸಾವು- ನೋವುಗಳಿಗೆ ನೀಡುವ ಪರಿಹಾರ ಮೊತ್ತವು ಪೊಲೀಸ್ ಸಿಬ್ಬಂದಿಗೆ ನೀಡುವ ಪರಿಹಾರಕ್ಕೆ ಸಮನಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕರ್ತವ್ಯ ನಿರತ ಸ್ವಯಂಸೇವಕ ಗೃಹರಕ್ಷಕ ಸದಸ್ಯರಿಗೆ ಪೊಲೀಸ್ ಆರೋಗ್ಯ ಭಾಗ್ಯದ ಮಾದರಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲು ಗೃಹರಕ್ಷಕ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br>ಆದಾಗ್ಯೂ, ಸರ್ಕಾರದ ಆದೇಶ ದಿನಾಂಕ: 11-07-2025 ರನ್ವಯ ಕರ್ತವ್ಯ/ ತರಬೇತಿ ಮತ್ತು ಕವಾಯತು ನಿರತ ಸಮಯದಲ್ಲಿ ನಿಧನ ಹೊಂದಿದ ಗೃಹರಕ್ಷಕ ಸದಸ್ಯರ ಕುಟುಂಬಕ್ಕೆ ನೀಡಲಾಗುತ್ತಿದ್ದ ಪರಿಹಾರ ಧನ ರೂ. 5.00 ಲಕ್ಷಗಳನ್ನು ಪರಿಷ್ಕರಿಸಿ ರೂ. 10.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.<br>ಕರ್ತವ್ಯ/ತರಬೇತಿ ಮತ್ತು ಕವಾಯತು ನಿರತ ಸಮಯದಲ್ಲಿ ಹಾಗೂ ಅಪಘಾತದಲ್ಲಿ ಗಾಯದ ಹಾನಿಯ ತೀವ್ರತೆಗೆ ಅನುಗುಣವಾಗಿ ಗೃಹರಕ್ಷಕ ಸದಸ್ಯರಿಗೆ ಪರಿಹಾರ ಧನ ಪಾವತಿಸಲಾಗುತ್ತಿದೆ.<br>ಅಲ್ಲದೇ, ಗೃಹರಕ್ಷಕರ ಕ್ಷೇಮ ನಿಧಿ ಮುಖಾಂತರ ಗೃಹರಕ್ಷಕ ಸದಸ್ಯರು ಮತ್ತು ಅವರ ಕುಟುಂಬ ಸದಸ್ಯರಿಗೆ ವೈದ್ಯಕೀಯ ವೆಚ್ಚವನ್ನು ನಿಯಮಗಳನ್ವಯ ಪಾವತಿಸಲಾಗುತ್ತಿದೆ. |
| (ಈ) | ಹವಾಮಾನ ವೈಪರೀತ್ಯಗಳ ನಡುವೆಯೂ ರಸ್ತೆಯಲ್ಲಿ ನಿಂತು ಕೆಲಸ ಮಾಡುವ ಗೃಹರಕ್ಷಕರಿಗೆ ಸಮವಸ್ತ್ರ, ಭತ್ಯೆ ಮಳೆಕೋಟಿ (Raincoats) ಮತ್ತು ಸುಸಜ್ಜಿತ ವಿಶ್ರಾಂತಿ ಕೊಠಡಿಗಳಂತಹ ಕನಿಷ್ಠ ಮಾನವೀಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಮೀಸಲಿಟ್ಟಿರುವ ಅನುದಾನವೆಷ್ಟು: | ಗೃಹರಕ್ಷಕರು ಕರ್ತವ್ಯಕ್ಕೆ ನಿಯೋಜನೆಗೊಂಡ ಸ್ಥಳಗಳಲ್ಲಿ ಪೊಲೀಸ್ ಹಾಗೂ ಗೃಹರಕ್ಷಕ ಇಲಾಖೆಯಿಂದ ವಿಶ್ರಾಂತಿ ಕೊಠಡಿ ಸೇರಿದಂತೆ ಇತರೆ ಮೂಲಭೂತ ಸೌಲಭ್ಯಗಳನ್ನು ಉಚಿತವಾಗಿ ಕಲ್ಪಿಸಲಾಗುತ್ತಿದೆ.<br>ಗೃಹರಕ್ಷಕರಿಗೆ ಸಮವಸ್ತ್ರ, ಭತ್ಯೆ, ರೇನ್‌ಕೋಟ್‌ಗಳನ್ನು ಒದಗಿಸಲು 2025-26ನೇ ಸಾಲಿನ ಆಯವ್ಯಯದಲ್ಲಿ ರೂ.108.00 ಲಕ್ಷಗಳನ್ನು ಒದಗಿಸಲಾಗಿತ್ತು. 2026-27ನೇ ಸಾಲಿನ ಆಯವ್ಯಯದಲ್ಲಿ ರೂ.112.00 ಲಕ್ಷಗಳನ್ನು ಒದಗಿಸಲಾಗಿದೆ. ಮೀಸಲಿರಿಸಿದ ಅನುದಾನದಲ್ಲಿ ಅಗತ್ಯಕ್ಕೆ ಅನುಗುಣವಾಗಿ ಕೇಂದ್ರ ಕಚೇರಿಯಿಂದ ಸಮವಸ್ತ್ರ, ಸಾಮಾಗ್ರಿಗಳು ಹಾಗೂ ರೇನ್‌ಕೋಟ್‌ಗಳನ್ನು ನಿಯಮಾನುಸಾರ ಖರೀದಿಸಿ, ಗೃಹರಕ್ಷಕರಿಗೆ ಒದಗಿಸಲಾಗುವುದು. |

| | | |
|---|---|---|
| (ಉ) | ಗೃಹರಕ್ಷಕರನ್ನು ಕೇವಲ 'ಅಗತ್ಯವಿದ್ದಾಗ ಬಳಸುವ' (On-call) ಸಿಬ್ಬಂದಿಯಾಗಿ ಪರಿಗಣಿಸದೆ ವರ್ಷದ 365 ದಿನಗಳೂ ನಿರಂತರ ಉದ್ಯೋಗ ಮತ್ತು ಸೇವಾ ಭದ್ರತೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ? | ರಾಜ್ಯದಲ್ಲಿ ಪ್ರಸ್ತುತ ನೋಂದಣಿಯಲ್ಲಿರುವ ಒಟ್ಟು 28,074 (ಪುರುಷ-22,612 ಮತ್ತು ಮಹಿಳೆ-5,462) ಸ್ವಯಂ ಸೇವಕ ಗೃಹರಕ್ಷಕ ಸದಸ್ಯರೆಲ್ಲರಿಗೂ ಅವಕಾಶ ಕಲ್ಪಿಸುವ ಹಿತದೃಷ್ಟಿಯಿಂದ ಗೃಹರಕ್ಷಕರನ್ನು ಸರದಿ ಆಧಾರದ ಮೇರೆಗೆ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ.<br><br>ಸಮಾಜದಲ್ಲಿನ ಆಸಕ್ತ ಅರ್ಹ ನಾಗರೀಕರು ಗೃಹರಕ್ಷಕದಳದಲ್ಲಿ ಗೌರವ ಸ್ವಯಂ ಸೇವಕ ಸದಸ್ಯರಾಗಿ ನೋಂದಣಿಗೊಂಡು, ತಮ್ಮ ವೈಯಕ್ತಿಕ ವೃತ್ತಿ ಮತ್ತು ಇತರೆ ಕರ್ತವ್ಯಗಳೊಂದಿಗೆ ಗೃಹರಕ್ಷಕ ಕರ್ತವ್ಯಗಳಿಗೆ ಕರೆ ನೀಡಿದಾಗ ಕೋರಿಕಾ ಅವಧಿ ಮತ್ತು ಸಂಖ್ಯೆಗೆ ಸೀಮಿತವಾಗಿ ಗೃಹರಕ್ಷಕರು ಕರ್ತವ್ಯ ನಿರ್ವಹಿಸುತ್ತಾರೆ.<br><br>ಗೃಹರಕ್ಷಕರು ಸ್ವಯಂಸೇವಕ ಸದಸ್ಯರಾಗಿರುವುದರಿಂದ, ಸೇವಾ ಭದ್ರತೆಯನ್ನು ಒದಗಿಸಲು ಗೃಹರಕ್ಷಕ ಕಾಯ್ದೆ/ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 37 ಎಸ್‌ಹೆಚ್‌ಜಿ 2026**

(signature)

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**